

# ಚಿತ್ರ ಕಲಾವಿದರನ್ನು ನೆನೆಯುತ್ತಾ..

■ ಪ್ರೇಮಕುಮಾರ್ ಹರಿಯಬ್ಬೆ



ಚಿತ್ರ: ಮಕಾಳಿ

ಕೆ.ಎನ್. ರಾಮಚಂದ್ರನ್

ಇತ್ತೀಚೆಗೆ ಬದುಕಿಗೆ ವಿದಾಯ ಹೇಳಿದ ಹಿರಿಯ ಕಲಾವಿದ ಕೆ.ಎನ್. ರಾಮಚಂದ್ರನ್ ನನ್ನ ಕಣ್ಣಿಗೆ ನಿರ್ಲಿಪ್ತ ಮನಸ್ಥಿತಿ ಹಾಗೂ ಗಾಢ ವಿಷಾದದಲ್ಲಿ ಮುಳುಗಿದವರಂತೆ ಕಾಣುತ್ತಿದ್ದರು. ಅವರ ಬಳಿ ಕೂತು ಕೆಲವು ಗಂಟೆಗಳ ಕಾಲ ಮಾತನಾಡುವ ಅವಕಾಶ ಸಿಕ್ಕಿದ್ದು 2012 ಮತ್ತು 2013ನೇ ವರ್ಷಗಳ ನಡುವಿನ ಒಂದೆರಡು ತಿಂಗಳ ಅವಧಿಯಲ್ಲಿ. ಕೆಲ ವರ್ಷಗಳ ಹಿಂದೆ ಅವರ ಚಿತ್ರಗಳ ಪ್ರದರ್ಶನದಲ್ಲಿ ಅವರನ್ನು ನೋಡಿದ್ದೆನಾದರೂ ನನ್ನ ಅವರ ನಡುವೆ ಹೆಚ್ಚಿನ ಮಾತು ಸಾಧ್ಯವಾಗಿರಲಿಲ್ಲ. ಅವರ ಪಕ್ಕ ಕೂತು, ಅವರೊಂದಿಗೆ ಹೆಜ್ಜೆ ಹಾಕುತ್ತ ಹಲವು ದಿನಗಳು ಮಾತನಾಡಿದ ಮೇಲೆ ಅವರಲ್ಲಿ ವಿಷಾದ ಮತ್ತು ನಿರ್ಲಿಪ್ತ ಭಾವಗಳು ಸ್ಥಾಯಿಯಾಗಿರುವುದಕ್ಕೆ ಕಾರಣಗಳು ತಿಳಿಯುತ್ತ ಹೋದವು. ಅವರ ಮನೆ (ಬೆಂಗಳೂರಿನ ಬಸವೇಶ್ವರ ನಗರದ) ಸಮೀಪದ ಪಾರ್ಕಿಗೆ ಸಂಜೆ ಹೊತ್ತು ಅಡ್ಡಾಡಲು ಬರುತ್ತಿದ್ದರು. ಅಲ್ಲಿಯೇ ಒಂದು ಸಂಜೆ ನಾನು ಅವರ ಎದುರು ನಿಂತು ಪರಿಚಯ ಹೇಳಿಕೊಂಡಿದ್ದೆ. ಮತ್ತೆ ಮತ್ತೆ ಭೇಟಿಯಾಗುತ್ತ ಹೋದಂತೆ ಅವರು ನನ್ನ ಜತೆ ಮಾತಿಗೆ ತೆರೆದುಕೊಂಡರು.

ಅನೇಕರಂತೆ ನಾನೂ ರಾಮಚಂದ್ರನ್ ಅವರನ್ನು ತಮಿಳು ಮೂಲದವರು ಎಂದೇ ಭಾವಿಸಿದ್ದೆ. ಅವರ ಹೆಸರು ಮತ್ತು ದೈಹಿಕ ಚಹರೆ ಅದನ್ನು ಸಾರಿ ಹೇಳುತ್ತಿತ್ತು. ನಿಮ್ಮ ಊರು ಯಾವುದು ಎಂದು ಒಮ್ಮೆ ಕೇಳಿದೆ. 'ನಮ್ಮದು ಬಳ್ಳಾರಿ. ನನ್ನ ಅಜ್ಜ, ಅವರ ಹಿರಿಯರೆಲ್ಲ ಅಲ್ಲಿಯೇ ಹುಟ್ಟಿ ಬೆಳೆದವರು. ಅಜ್ಜ, ಅವರ ಪ್ರಾಯದ ದಿನಗಳಲ್ಲಿ ಬಳ್ಳಾರಿ ಬಿಟ್ಟು ತಮಿಳುನಾಡಿಗೆ ಹೋದರು. ಹಾಗೆ ಹೋಗಲು ಒಂದು ಬಲವಾದ ಕಾರಣ ಇತ್ತು. ನನ್ನ ಅಪ್ಪ, ನಾನು ಹುಟ್ಟಿದ್ದು ತಮಿಳುನಾಡಿನಲ್ಲಿ. ಇಪ್ಪತ್ತನೇ ವಯಸ್ಸಿನಲ್ಲಿ ನಾನು ತಮಿಳುನಾಡು ಬಿಟ್ಟು ಬೆಂಗಳೂರಿಗೆ ಬಂದೆ. ಅರವತ್ತು ವರ್ಷಗಳಿಂದ ಇಲ್ಲಿಯೇ ಇದ್ದೇನೆ. ಬೆಂಗಳೂರು ನನ್ನ ಕೈಹಿಡಿದು ನಡೆಸಿದೆ.

-38ನೇ ಪುಟಕ್ಕೆ..